## ಕಾಡಿಗೆ ಕಣ್ಣು

ನಿಖರ ಜಾಗ ಸಿಗದ ಅನೇಕರು ಇಲ್ಲಿ ಒದ್ದಾಡುತ್ತಿದ್ದರು. ಅವಕಾಶ ಸಿಗದ ನಾನೂ ಹಿಂದಿನ ಸಾಲಲ್ಲಿ ನಿಂತಿದ್ದೆ. ಯಾರಾದರೂ ಕೊಂಚ ಕದಲಿದರೂ ಸಾಕು ತಮ್ಮ ಟ್ರೈಪಾಡನ್ನು ತೂರಿಸಿ ಜಾಗ ಗಿಟ್ಟಿಸಲು ಅನೇಕರು ಹೊಂಚು ಹಾಕುತ್ತಿದ್ದರು. ಇಕ್ಕಟ್ಟಾದ ಆ ಸ್ಥಳದಲ್ಲಿ ಹೆಚ್ಚು ಜನ ಮುಂದೆ ನಿಲ್ಲಲು ಆಸ್ಪದವೂ ಇರಲಿಲ್ಲ. ಅದರಲ್ಲಿ ಈ ಶನಿ ಮನುಷ್ಯ ಆಯಕಟ್ಟಿನ ಜಾಗ ದಕ್ಕಿದ್ದರೂ ಟ್ರೈಪಾಡ್ ಅಸಡಾಬಸಡಾ ಜೋಡಿಸಿ, ಕಿತ್ತು ತೆಗೆದು, ಮತ್ತೆ ಜೋಡಿಸುತ್ತಾ ಫಜೀತಿಗೊಳ್ಳುತ್ತಿದ್ದ. ಹೀಗಿರುವಾಗ ಟ್ರೈಪಾಡಿನ ಒಂದು ಕಾಲು ಕಿತ್ತು ಕೈಗೇ ಬಂದು ಬಿಟ್ಟಿತು. 'ಥೂ... ನಾನ್‌ಸೆನ್ಸ್' ಎನ್ನುತ್ತಾ, ಅದನ್ನು ರಿಪೇರಿ ಮಾಡಲು ಸರತಿ ಸಾಲಿನಿಂದ ಟ್ರೈಪಾಡ್ ಎತ್ತಿ ಹಿಂದಕ್ಕೆ ತಂದುಬಿಟ್ಟ. ಅಷ್ಟರಲ್ಲಿ ಬಕಪಕ್ಷಿಯಂತೆ ಕಾಯುತ್ತಿದ್ದ ಒಬ್ಬರು ಹಾರಿಬಿದ್ದು ಇವನ ಜಾಗ ಆಕ್ರಮಿಸಿಕೊಂಡು



ಬಿಟ್ಟರು. ಓಹೋ! ಅಲ್ಲಿಂದ ಶುರುವಾಯಿತು ನೋಡಿ ಇವನ ಸಹಸ್ರ ನಾಮಾವಳಿ. ಸಣ್ಣ ಗೊಣಗಾಟದಿಂದ ಶುರುವಾದ ಇವನ ಬಾಯಬ್ಬರ ಕಾಡಿನ ಸಕಲ ಪ್ರಾಣಿಪಕ್ಷಿಗಳನ್ನೂ ಏಕಕಾಲದಲ್ಲಿ ಒದ್ದೋಡಿಸುವಂತೆ ಮುಂದುವರಿಯಿತು. ಯಾರೆಷ್ಟೇ ಸಮಾಧಾನ ಹೇಳಿದರೂ, ತಿರುಗಿ ಅದೇ ಜಾಗ ಕೊಡುತ್ತೇವೆ ಬನ್ನಿ ಸರ್ ಎಂದು ಕೋರಿದರೂ ಇವನು ಮಾತ್ರ ಸುಮ್ಮನಾಗಲೇ ಇಲ್ಲ.

ಜಗಳ ಮುಂದುವರಿಸುತ್ತಲೇ ತನ್ನ ಟ್ರೈಪಾಡ್ ರಿಪೇರಿ ಕೆಲಸವನ್ನೂ ಜಾರಿಯಲ್ಲಿಟ್ಟಿದ್ದ. ಕ್ಯಾಮೆರಾ ಸಾಧನಗಳನ್ನು ಇವನು ಬಳಸುವ ಉಗ್ರಪರಿ ನೋಡಿಯೇ ಇವನು ಅಡ್ಡಕಸುಬಿ ಎಂದು ಸಣ್ಣ ಮಗುವಾದರೂ ಹೇಳಬಹುದಿತ್ತು. ಸೇಡು ತೀರಿಸಿಕೊಳ್ಳುವ ರೀತಿ ಕ್ಯಾಮೆರಾದ ಕತ್ತು ತಿರುಗಿಸಿ ಹಿಸುಕುತ್ತಿದ್ದ; 'ಈಪಾಟಿ ಕಿರುಚಾಡಿದ ಮೇಲೆ ಮತ್ತೆಲ್ಲಿ ಪಕ್ಷಿಗಳು ಬರುತ್ತವೆ ಇವನ ಪಿಂಡ' ಎಂದು ಕೆಲವರು ಹಿಂದೆ ಸರಿದು ನಿಂತರು. ಪಿತ್ತ ನೆತ್ತಿಗೆ ಹತ್ತಿದ ಒಬ್ಬರು 'ನಿಮ್ಮಂಥವರು ಯಾಕ್ರಿ ಇಂಥಲ್ಲಿಗೆ ಬರ್ತೀರಿ. ಎಲ್ಲಾದ್ರೂ ಜಾತ್ರೆಗೋ, ಸಂತೆಗೋ, ಹೋಗಬಾರ್ದಾ. ಫೋಟೋಗ್ರಫಿ ಬೇಸಿಕ್ ಎಥಿಕ್ಸ್ ಗೊತ್ತಿಲ್ಲ ಅಂದ್ರೆ ಯಾಕೆ ಬರ್ಬೇಕು? ನೇಚರ್ ಎಂಜಾಯ್ ಮಾಡೋ ಮಿನಿಮಮ್ ಕಾಮನ್‌ಸೆನ್ಸ್ ಇಲ್ಲದೋರು ಮನೆ, ಟಿವಿ ಮುಂದೆ ಗೂಬೆ ರೀತಿ ಬಿದ್ದಿರಬೇಕು. ನೇಚರ್ ನೋಡೋಕೆ ಬರೋರಿಗೆ ಒಂದು ಸನ್ನೆ ಸೂಕ್ಷ್ಮ ಅಂತ ಇರುತ್ತೆ' ಎಂದರು.

ತನಗೂ ಇವರ ಮಾತಿಗೂ ಸಣ್ಣ ಸಂಬಂಧವೂ ಇಲ್ಲದ ಮೊಂಡು ಕಿವಿ ತಮಟೆಯವನಂತೆ, ರೇಗಾಡಿದವನು ತನ್ನದೇ ದುನಿಯಾದಲ್ಲಿದ್ದ. ಟ್ರೈಪಾಡನ್ನು ಪೇಶಂಟ್ ಥರಹ ನೆಲಕ್ಕೆ ಕೆಡವಿಕೊಂಡು ಆಪರೇಷನ್ ಮಾಡುತ್ತಿದ್ದ. ಅಷ್ಟರಲ್ಲಿ ಕೆರಳಿದ್ದ ಹೆಣ್ಣು ದನಿಯೊಂದು ಗುಂಪಿನಿಂದ ಎಗರಿ ಬಂದು, 'ನಾವು ಎಷ್ಟೊಂದು ದುಡ್ಡು ಖರ್ಚು ಮಾಡ್ಕೊಂಡು ಸಣ್ಣ ನೆಮ್ಮದಿ ಪಡೆಯೋಕೆ ಅಂತಾನೇ ದೂರದಿಂದ ಎದ್ನೋ ಬಿದ್ನೋ ಅಂತ ಸಂಸಾರ ಸಾಕಾಗಿ ಬಂದಿರ್ತೀವಿ. ಗೊತ್ತಾಗಲ್ವಾ ನಿಮಗೆ? ನಿಮ್ಮಿಂದ ಇಲ್ಲಿರೋ ಇಪ್ಪತ್ತು ಜನಕ್ಕೆ ಡಿಸ್ಟರ್ಬ್ ಆಗ್ತಿದೆ, ಹರ್ಟ್ ಆಗ್ತಿದೆ, ಅನ್ನೋ ಸಣ್ಣ ಸೂಕ್ಷ್ಮಾನೂ ಇಲ್ವಲ್ರಿ. ದುಡ್ಡಿದೆ ಅಂತ ತೋರ್ಸೋಕೆ ದೊಡ್ಡ ಕ್ಯಾಮೆರಾ ಬೇರೆ ಹೊತ್ಕೊಂಡ್ ಬಂದ್ಬಿಡ್ತೀರಾ ನಾಚಿಕೆಯಿಲ್ಲದೆ' ಎಂದು ನಿವಾಳಿಸಿದರೂ ಈತ ಜಪ್ಪಯ್ಯ ಎನ್ನಲಿಲ್ಲ. ಕೊಂಚವೂ ವಿಚಲಿತನಾಗದೆ, ಬೈದವರ ಮೇಲೆ ಎಗರಿ ಹೋಗದೆ ತನ್ನ ಪಾಡಿಗೆ ತಾನು ಗೊಣಗುತ್ತಾ, ತನ್ನ ರಾಗ ಬಜಾಯಿಸುತ್ತಲೇ ಇದ್ದ.

ನಾವೆಲ್ಲ ಓರೆಗಣ್ಣಿನಿಂದ ಇವನ ವಿಚಿತ್ರ ಚಡಪಡಿಕೆ ನೋಡಿ ಮುಸಿಮುಸಿ ನಗುತ್ತಿದ್ದೆವು. ಕಾನನದ ಈ